**ದಿನಾಂಕ 14.07.2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ ಡಿ.ಜಿ. ವಕೀಲರಿಂದಃ**

1. ನಾವು ಕಬ್ಬು ಬೆಳೆದು ಫ್ಯಾಕ್ಟರಿಗೆ ಹೊಡೆಯುತ್ತಿದ್ದೆವು ಎಂದು ಹೇಳಿದ್ದು, ಶ್ಯುಗರ್ ಫ್ಯಾಕ್ಟರ್ 1985 ರಲ್ಲಿ ನಿಂತುಹೋಗಿದೆ ಎಂದರೆ ಸಾಕ್ಷಿಯು ನಾವು ಕಬ್ಬು ಮಾತ್ರವಲ್ಲ ಸೂರ್ಯಕಾಂತಿ, ಹತ್ತಿ ಕಡ್ಲೆಕಾಯಿ ಸಹ ಬೆಳೆಯುತ್ತಿದ್ದೆವು ಎಂದು ನುಡಿಯುತ್ತಾರೆ. ನಾವು ಕಬ್ಬು ಹೊಡೆಯುತ್ತಿದ್ದೆವು ಎಂದು ಹೇಳುತ್ತಿದ್ದ ಕಾಲಕ್ಕೆ ನಾನು ಹುಟ್ಟಿರಲಿಲ್ಲ ಎಂದರೆ ಸಾಕ್ಷಿಯು ನಮ್ಮ ತಂದೆ ಹೇಳುತ್ತಿದ್ದ ಕಾರಣ ನಾನು ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಸೂರ್ಯಕಾಂತಿ ಮತ್ತು ಇತರೆ ಬೆಳೆಗಳನ್ನು ಯಾವ ಮಂಡಿಗೆ ಹಾಕುತ್ತಿದ್ದೀರಿ ಎಂದರೆ ಸಾಕ್ಷಿಯು ನಾನು ವ್ಯವಹಾರ ಮಾಡುತ್ತಿರಲಿಲ್ಲ, ಅದರ ಬಗ್ಗೆ ನನಗೆ ಮಾಹಿತಿ ಇಲ್ಲ, ನನ್ನ ತಂದೆಗೆ ಗೊತ್ತು ಎಂದು ನುಡಿಯುತ್ತಾರೆ.

2. ನಮ್ಮ ತಂದೆಗೆ ಕಿಡ್ನಿಯನ್ನು ನಮ್ಮ ತಾಯಿ ಅಥವ ನನಗೆ ಕೊಡಲು ವೈಧ್ಯರು ತಿಳಿಸಿದ್ದರು ಎಂದರೆ ಸಾಕ್ಷಿಯು ಡಯಾಲಿಸಿಸ್ ಆಯ್ಕೆ ಇದ್ದ ಕಾರಣ ನಾವು ಡಯಾಲಿಸಿಸ್ ಮಾಡಿಸುತ್ತಿದ್ದೆವು. ವೈಧ್ಯರು ಹೇಳಿದ್ದರೂ ಸಹ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದಗೆ ಕಿಡ್ನಿ ತೀರಿ ತೊಂದರೆಗೆ ಒಳಗಾದ ಕಾರಣ ಹಾಗೂ ನಾವು ನಿರ್ಲಕ್ಷ ಮಾಡಿದ್ದ ಕಾರಣ ನನ್ನ ತಂದೆ ಅವರ ಅಣ್ಣನ ಮನೆಗೆ ಹೋಗಿ ಸೇರಿಕೊಂಡಿದ್ದರು ಎಂದರೆ ಸರಿಯಲ್ಲ. ಡಾ. ರಂಗೇಗೌಡರ ಬಳಿ ನಾನೇ ಖುದ್ದಾಗಿ ಚಿಕಿತ್ಸೆ ಕೊಡಿಸಿದ್ದೇವೆ ಎಂದು ಸಾಕ್ಷಿ ನುಡಿಯುತ್ತಾರೆ. ಆ ರೀತಿ ಚಿಕಿತ್ಸೆ ಕೊಡಿಸಿರುವ ಬಗ್ಗೆ ಯಾವುದೇ ದಾಖಲಾತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ಮತ್ತು ನಾವುಗಳು ನಮ್ಮ ತಂದೆಯನ್ನು ಚಿಕಿತ್ಸೆ ಕೊಡಿಸದೇ ದುಡ್ಡು ಖರ್ಚು ಆಗುತ್ತದೆ ಎಂದು ನಿರ್ಲಕ್ಷ ಮಾಡಿದ ಕಾರಣ ನನ್ನ ತಂದೆ ಅವರ ಅಣ್ಣನ ಬಳಿಗೆ ಹೋಗಿ ಸೇರಿಕೊಂಡಿದ್ದರು ಎಂದರೆ ಸರಿಯಲ್ಲ.

3. ನಾವು ನಮ್ಮ ತಂದೆಗೆ ಸರಿಯಾಗಿ ಚಿಕಿತ್ಸೆ ಕೊಡಿಸದೇ ಅವರಿಗೆ ಹೊಡೆದು ಬಡೆದು ಹಿಂಸೆ ಕೊಟ್ಟಿದ್ದರಿಂದ ಹಿರಿಯೂರು ಪೊಲೀಸ್ ಠಾಣೆಯಲ್ಲಿ ನನ್ನ ತಾಯಿ ಮತ್ತು ನನ್ನ ಮೇಲೆ ನನ್ನ ತಂದೆ ದೂರು ನೀಡಿದ್ದರು ಎಂದರೆ ಸರಿಯಲ್ಲ. ವಾರಕ್ಕೆ ಎರಡು ಬಾರಿ ಡಯಾಲಸಿಸ್ ಮಾಡಿಸಬೇಕು ಎಂದರೆ ಸರಿ. ಒಂದು ಬಾರಿ ಡಯಾಲಸಿಸ್ ಮಾಡಿಸಲು 4-5 ಸಾವಿರ ಖರ್ಚು ಆಗುತ್ತದೆ ಎಂದರೆ ಸಾಕ್ಷಿಯು ಬಿ.ಪಿ.ಎಲ್ ಮತ್ತು ಯಶಸ್ವಿನಿ ಕಾರ್ಡ್ ಇದ್ದ ಕಾರಣ

1-2 ಸಾವಿರ ರೂಪಾಯಿಗಳು ಖರ್ಚು ಆಗುತ್ತಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಬಿ.ಪಿ.ಎಲ್. ಕಾರ್ಡ್ ನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಆ ರೀತಿ ಯಾವುದೇ ಬಿ.ಪಿ.ಎಲ್. ಅಥವಾ ಯಶಸ್ವಿನಿ ಕಾರ್ಡ್ ನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಅಶೋಕ್ ರವರೇ ನನ್ನ ತಂದೆಯನ್ನು 5-6 ವರ್ಷಗಳ ಕಾಲ ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ 2 ನೇ ಪ್ರತಿವಾದಿಯೇ ಡಯಾಲಸಿಸ್ ಮಾಡಿಸುತ್ತಿದ್ದು, ಅವರಿಗೆ ತಿಂಗಳಿಗೆ 32-40 ಸಾವಿರ ರೂಪಾಯಿಗಳು ಖರ್ಚು ಆಗುತ್ತಿತ್ತು ಎಂದರೆ ಸರಿಯಲ್ಲ.

4. ಕರೋನ ಸಮಯದಲ್ಲೂ ಸಹ ಅವರು ಶಿರಾಗೆ ಕರೆದುಕೊಂಡು ಬಂದು 2 ನೇ ಪ್ರತಿವಾದಿಯು ನನ್ನ ತಂದೆಗೆ ಡಯಾಲಸಿಸ್ ಮಾಡಿಸಿ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸಾಕ್ಷಿಯು ಸರಿಯಲ್ಲ ತುಮಕೂರಿನ ನಮ್ಮ ಮನೆಯಿಂದಲೇ ಓಡಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಹಿರಿಯೂರು ತಾಲ್ಲೂಕು ಪಿಟ್ಲಾಡಿ ಗ್ರಾಮದಲ್ಲಿ 2 ನೇ ಪ್ರತಿವಾದಿಯ ಜೊತೆ ವಾಸವಿದ್ದರು ಎಂದರೆ ಸರಿಯಲ್ಲ. ನಾನು ಯಾವುದೇ ಮೂಲ ವೈಧ್ಯಕೀಯ ಸರ್ಟಿಫಿಕೇಟನ್ನು ಕೊಟ್ಟಿಲ್ಲ ಎಂದರೆ ಸರಿ, ಸಾಕ್ಷಿಯು ಮೂಲ ದಾಖಲಾತಿಗಳು ಬೇಕಾದಲ್ಲಿ ತಂದುಕೊಡುತ್ತೇನೆ ಎಂದು ಸಾಕ್ಷಿ ಮುಂದುವರೆದು ನುಡಿಯುತ್ತಾರೆ. ಮೂಲ ದಾಖಲಾತಿಗಳು 2 ನೇ ಪ್ರತಿವಾದಿಯ ಬಳಿ ಇವೆ ಎಂದರೆ ಸರಿಯಲ್ಲ.

5. ಆಸ್ಪತ್ರೆಯ ಖರ್ಚು ಹೆಚ್ಚಾದ ಕಾರಣ ಮತ್ತು ನನ್ನ ತಂದೆ ಆಸ್ಪತ್ರೆಯ ಖರ್ಚಿಗಾಗಿ ಎಲ್ಲಾ ಕಡೆ ಸಾಲ ಮಾಡಿಕೊಂಡ ಕಾರಣ ದಾವಾ ಆಸ್ತಿಯ ಐಟಂ ನಂ.1 ರ ಆಸ್ತಿಯನ್ನು 2 ನೇ ಪ್ರತಿವಾದಿಗೆ ರೂ. 5,25,000/- ರೂಪಾಯಿಗಳಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಮಾರಾಟ ಮಾಡಿದ ಕಾರಣ ಖಾತೆ ಪಹಣಿ 2 ನೇ ಪ್ರತಿವಾದಿಯ ಹೆಸರಿಗೆ ಬಂದಿದ್ದು, 2 ನೇ ಪ್ರತಿವಾದಿಯವರು ಸದರಿ ಜಮೀನನ್ನು ಸಾಕಷ್ಟು ಅಭಿವೃದ್ಧಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಗಮನಕ್ಕೆ ಬರದಂತೆ ನಮ್ಮ ಸಹಿಯನ್ನು ಪಡೆಯದೆ ಮಾರಾಟ ಮಾಡಿದ್ದು, ನಮ್ಮ ತಂದೆಗೂ ನಮಗೂ ಮೋಸ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನನಗಾಗಲೀ ನನ್ನ ತಂದೆಗಾಗಲೀ ಯಾವುದೇ ಮೋಸವನ್ನು ಮಾಡಿಲ್ಲ ಎಂದರೆ ಸರಿಯಲ್ಲ.

6. ದಾವಾ ಐಟಂ ನಂ.3 ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಆಗಿದ್ದು, ನನ್ನ ತಂದೆಯನ್ನು 2 ನೇ ಪ್ರತಿವಾದಿಯೇ ನೋಡಿಕೊಂಡಿದ್ದ ಕಾರಣ ಅವರ ಹೆಸರಿಗೆ ವಿಲ್ ನ್ನು ನನ್ನ ತಂದೆ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.4 ನನ್ನ ತಂದೆಯ ಸ್ವಯಾರ್ಜಿತ

ಸ್ವತ್ತಾಗಿದ್ದು, ಅದನ್ನು ನನ್ನ ತಂದೆ 2 ನೇ ಪ್ರತಿವಾದಿಗೆ ದಾನಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಕೇಸು ದಾಖಲಾದ ನಂತರ ನಮ್ಮ ಗಮನಕ್ಕೆ ಬಾರದಂತೆ ದಾನ ಪತ್ರ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.4 ನ್ನು 5 ನೇ ಪ್ರತಿವಾದಿಗೆ 2 ನೇ ಪ್ರತಿವಾದಿಯು ನನ್ನ ತಂದೆಯ ಖರ್ಚು ವೆಚ್ಚ ಜಾಸ್ತಿಯಾದ ಕಾರಣ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಮಾರಾಟ ಮಾಡಿ ಬಂದ ಹಣದಿಂದ ನನ್ನ ತಂದೆಯ ಔಷಧಿಗೆ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ.

7. ಸರ್ವೆ ನಂ. 126/5 ರ ಜಮೀನನ್ನು ನನ್ನ ತಾಯಿಯ ಹೆಸರಿನಲ್ಲಿ ಇದ್ದು, ಅದನ್ನು ನನ್ನ ತಾಯಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನನ್ನ ದೊಡ್ಡಪ್ಪ ಮತ್ತು ನನ್ನ ಅಜ್ಜಿ ಇಬ್ಬರೂ ಸೇರಿ ನನ್ನ ತಂದೆಗೆ ಕಿಡ್ನಿ ಕೊಡಿಸುತ್ತೇವೆ ಎಂದು ಹೇಳಿ ಸದರಿ ಆಸ್ತಿಯನ್ನು ಮಾರಾಟ ಮಾಡಿಸಿದ್ದು, ಮಾರಾಟ ಮಾಡಿದ ನಂತರ ಅವರು ನಮ್ಮನ್ನು ಬಂದು ನೋಡಿರುವುದಿಲ್ಲ. ಸದರಿ ಆಸ್ತಿಯನ್ನು ಸಹ ನನ್ನ ತಾಯಿಯಿಂದ ಬಲವಂತವಾಗಿ ಮಾರಾಟ ಮಾಡಿಸಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಕ್ರಯ ಪತ್ರಕ್ಕೆ 2 ನೇ ಪ್ರತಿವಾದಿ ಸಹಿ ಮಾಡಿದ್ದಾರಾ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯತ್ತೂರೆ. 2 ನೇ ಪ್ರತಿವಾದಿಗೆ ಸದರಿ ಆಸ್ತಿಯನ್ನು ಮಾರಾಟ ಮಾಡಿರುವ ವಿಚಾರವೇ ನನಗೆ ಗೊತ್ತಿಲ್ಲ ನಾವೇ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ದಾವೆಗೆ ಸೇರಿಸಿದ್ದೀರಾ ಎಂದರೆ ಸಾಕ್ಷಿಯು ಅದು ಮಾರಾಟ ಆಗಿರುವ ಕಾರಣ ಸೇರಿಸಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ದಾವಾ ಐಟಂ ನಂ. 1 ರ ಸ್ವತ್ತು ಸಹ ಮಾರಾಟ ಆಗಿದೆ ಎಂದರೆ ಸಾಕ್ಷಿಯು ಅದು ಪಿತ್ರಾರ್ಜಿತ ಸ್ವತ್ತು ಆಗಿದ್ದು, ನಮ್ಮ ಯಾರ ಸಹಿ ಇಲ್ಲದೇ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ.

8. ಮೈಸೂರಿನ ಕೆ.ಹೆಚ್.ಪಿ. ಕಾಲೋನಿಯಲ್ಲಿರುವ ಮನಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ, ಅದನ್ನು ಬಲವಂತವಾಗಿ ಮಾರಾಟ ಮಾಡಿಸಿದ್ದಾರೆ, ಸದರಿ ಆಸ್ತಿಯನ್ನು ಕೇಸಿನಲ್ಲಿ ಸೇರಿಸಿಲ್ಲ. ಸದರಿ ಆಸ್ತಿಯನ್ನು ಕೇಸಿಗೆ ಸೇರಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಇರುವ ಆಸ್ತಿಯನ್ನು ಉಳಿಸಿಕೊಂಡರೆ ಸಾಕಾಗಿದೆ, ನಮಗೆ ಆ ಸಮಯದಲ್ಲಿ ಲೋನ್ ಇದ್ದ ಕಾರಣ ಮಾರಾಟ ಮಾಡಿದ್ದೇವೆ ಎಂದು ನುಡಿಯುತ್ತಾರೆ. ತುಮಕೂರಿನಲ್ಲಿ ಇದ್ದಂತಹ ಆಸ್ತಿಯನ್ನು ಮಾರಾಟ ಮಾಡಲಾಗಿದೆ ಎಂದರೆ ಸರಿ. ಸದರಿ ಆಸ್ತಿಯನ್ನು ದಾವೆಗೆ ಸೇರಿಸಲು

ತೊಂದರೆ ಇದೆಯೇ ಎಂದರೆ ಸಾಕ್ಷಿಯು ಅದನ್ನು ಮಾರಾಟ ಮಾಡಿ ನಾವು ಶಿರಾದಲ್ಲಿ ಸೈಟು ತೆಗೆದುಕೊಂಡು ಮನೆಯನ್ನು ಕಟ್ಟಿಸಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ತುಮಕೂರಿನಲ್ಲಿ ಇರುವ ಸೈಟನ್ನು ಎಷ್ಟನೇ ಸಾಲಿನಲ್ಲಿ ಮಾರಾಟ ಮಾಡಲಾಗಿದೆ ನನಗೆ ಗೊತ್ತಿಲ್ಲ, ನನ್ನ ತಂದೆ ಮಾರಾಟ ಮಾಡಿದ್ದರು ಎಂದು ನುಡಿಯುತ್ತಾರೆ. ನ್ಯಾಯಾಲಯದ ಅನುಕಂಪ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ಜವಗೊಂಡನಹಳ್ಳಿಯಲ್ಲಿ ಒಂದು ಸೈಟು ಇತ್ತು ಎಂದರೆ ಸರಿ. ಅದನ್ನು ಸಹ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಆ ಸ್ವತ್ತನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಪಂಜಿಗನಹಳ್ಳಿಯಲ್ಲಿ ಒಂದು ಸೈಟು ಇದೆ ಎಂದರೆ ಸಾಕ್ಷಿಯು ನನ್ನ ತಂದೆಯೇ ಅದನ್ನು ಖರೀದಿಸಿದ್ದು, ನನ್ನ ತಾಯಿಯ ಹೆಸರಿನಲ್ಲಿ ಖಾತೆ ಇದೆ ಎಂದು ನುಡಿಯುತ್ತಾರೆ. ನನ್ನ ತಂದೆ ಸತ್ತ ನಂತರ ಅದನ್ನು ನನ್ನ ತಾಯಿ ಖಾತೆ ಮಾಡಿಸಿಕೊಂಡಿದ್ದು, ಅದನ್ನು ದಾವೆಯಲ್ಲಿ ಸೇರಿಸಿಲ್ಲ. ತುಮಕೂರಿನ ಬೆಳಗುಂಬದಲ್ಲಿ ಮೂರು ಸೈಟು ಇದೆ ಎಂದರೆ ಸರಿಯಲ್ಲ. ಸದರಿ ಸೈಟುಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸದರಿ ಸೈಟುಗಳು ಯಾವು ನಮ್ಮ ಹೆಸರಿಗೆ ಆಗಿಲ್ಲ ಎಂದು ನುಡಿಯುತ್ತಾರೆ. ಸದರಿ ಸೈಟುಗಳು ನನ್ನ ತಾಯಿಯ ಹೆಸರಿನಲ್ಲಿ ಪತ್ರ ಆಗಿದೆ ಎಂದರೆ ಸರಿಯಲ್ಲ.

**10.** ನನ್ನ ತಂದೆಯ ಸ್ವಯಾರ್ಜಿತ ಸ್ವತ್ತನ್ನು 2 ನೇ ಪ್ರತಿವಾದಿಗೆ ದಾನ ಪತ್ರ ಕೊಟ್ಟಿದ್ದಾರೆ ಎಂದರೆ ನ್ಯಾಯಾಲಯದಲ್ಲಿ ಕೇಸು ಹಾಕಿದ ನಂತರ ನಮಗೆ ಮೋಸ ಮಾಡುವ ಉದ್ದೇಶದಿಂದ ದಾನಪತ್ರ ಬರೆಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆ 11.06.2020 ರಂದು ವಿಲ್ ಪತ್ರ ಬರೆದಿದ್ದು, ಅದರಲ್ಲಿ ಯಾವ ಕಾರಣದಿಂದ ವಿಲ್ ಮಾಡುತ್ತಿದ್ದೇವೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ನನ್ನ ತಂದೆಗೆ ಗೊತ್ತಾಗುತ್ತಿರಲಿಲ್ಲ, ಆದ್ದರಿಂದ ನನ್ನ ತಂದೆಗೆ ಮೋಸ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಖುದ್ದು ಬರೆಸಿದ್ದಾರೆ ಎಂದರೆ ಸರಿಯಲ್ಲ, ಅವರಿಗೆ ಮೋಸ ಮಾಡಿ ಬರೆಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಬಿ.ಇ. ಪದವೀಧರನಾಗಿದ್ದು, ಅವರಿಗೆ ಮೋಸ ಮಾಡಲು ಯಾರು ಸಾಧ್ಯವಾಗುತ್ತಿರಲಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯ ಕೊನೆಗಾಲದಲ್ಲಿ ಅವರಿಗೆ ಹುಷಾರಿಲ್ಲದ ಕಾರಣ ಅವರಿಗೆ ಗೊತ್ತಾಗುತ್ತಿರಲಿಲ್ಲ. ನನ್ನ ತಂದೆಗೆ ಮೋಸ ಆಗಿದೆ ಎಂದು ದೂರು ಕೊಟ್ಟಿದ್ದೀರಾ ಎಂದರೆ

ಸಾಕ್ಷಿಯು ದೂರು ಕೊಟ್ಟಿಲ್ಲ ಆದರೆ ನ್ಯಾಯಾಲಯದಲ್ಲಿ ಕೇಸು ಹಾಕಿದ್ದೇನೆ ಎಂದು ನುಡಿಯುತ್ತಾರೆ.

11. ವಿಲ್ ಪತ್ರದಲ್ಲಿ ನಾವು ನಮ್ಮ ತಂದೆಯನ್ನು ಕಡೆಗಣಿಸಿರುವುದನ್ನು ವಿವರವಾಗಿ ಬರೆಯಲಾಗಿದೆ ಎಂದರೆ ಸಾಕ್ಷಿಯು ನನ್ನ ತಂದೆಯನ್ನು ನಾನೇ ನೋಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆಯು 2 ನೇ ಪ್ರತಿವಾದಿಯ ಮನೆಯಲ್ಲಿ ತೀರಿಕೊಂಡಿದ್ದು, ನಮ್ಮ ಮನೆಯಲ್ಲಿ ತೀರಿಕೊಂಡಿಲ್ಲ ಎಂದರೆ ಸಾಕ್ಷಿಯು ನಮ್ಮ ತಂದೆಗೆ ಹುಷಾರಿಲ್ಲದೇ ಇರುವ ಸಮಯದಲ್ಲಿ ತಾತನ ಮನೆಯಾದ ಜವಗೊಂಡನಹಳ್ಳಿ ಇದ್ದು ಆ ದಿನ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾಗಿದ್ದು, ಕರೆದುಕೊಂಡು ಹೋಗುವಷ್ಟರಲ್ಲಿ ನನ್ನ ತಂದೆ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ತಾತನ ಊರು ಕರಿಯಾಲ ಜವಗೊಂಡನಹಳ್ಳಿ ಅಲ್ಲ ಎಂದರೆ ಸಾಕ್ಷಿಯು ನನ್ನ ತಾತನ ತಮ್ಮನ ಊರು ಜವನಗೊಂಡನಹಳ್ಳಿಯಾಗಿದ್ದು, ನಮ್ಮ ತಾತನ ತಮ್ಮ ಸಹ ನನಗೆ ತಾತನೇ ಆಗಬೇಕಾಗಿದ್ದು, ಅದು ಆಸ್ಪತ್ರೆಗೆ ಹತ್ತಿರ ಇದ್ದ ಕಾರಣ ಅಲ್ಲೇ ಉಳಿದುಕೊಳ್ಳುತ್ತಿದ್ದೆವು. ಜವನಗೊಂಡನಹಳ್ಳಿಯಲ್ಲಿ ಕಿಡ್ನಿ ಸಮಸ್ಯೆಯನ್ನು ತೋರಿಸುವಂತಹ ಯಾವುದೇ ಆಸ್ಪತ್ರೆ ಇಲ್ಲ ಎಂದರೆ ಸಾಕ್ಷಿಯು ತುರ್ತು ಇದ್ದಲ್ಲಿ ತೋರಿಸಲು ಸಾಧ್ಯವಿರುವಂತಹ ಕ್ಲಿನಿಕ್ ಗಳು ಇದ್ದವು ಎಂದು ನುಡಿಯುತ್ತಾರೆ. ಡಾ.ಕಿರಣ್ ರವರ ಕ್ಲಿನಿಕ್ ನಲ್ಲಿ ತೋರಿಸಿದ್ದೆವು.

12. ಜವನಗೊಂಡನ ಹಳ್ಳಿಯಲ್ಲಿ ಯಾರು ಎಂ.ಬಿ.ಬಿ.ಎಸ್. ಮಾಡಿರುವಂತಹ ವೈಧ್ಯರು ಇಲ್ಲ ಎಂದರೆ ಸರಿಯಲ್ಲ. ಎಲ್ಲಾ ಸೇವೆಗಳನ್ನು 2 ನೇ ಪ್ರತಿವಾದಿಯೇ ಮಾಡಿದ್ದು, ಅವರೇ ನನ್ನ ತಂದೆಯನ್ನು ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ನಾವು ನೀಡಿರುವ ಚಿತ್ರಹಿಂಸೆಯನ್ನೂ ಸಹ ಅವರು ಪತ್ರದಲ್ಲಿ ತಮ್ಮ ಅಣ್ಣನಿಗೆ ಬರೆದಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಗೂ ಮತ್ತು ನನ್ನ ತಂದೆಗೆ ಹೊಂದಾಣಿಕೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಅಕ್ಕನ ಮಗಳೇ ಆಗಿದ್ದ ಕಾರಣ ಹೊಂದಾಣಿಕೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಸದರಿ ವಿಚಾರ ಬರೆಸಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ನನ್ನ ತಂದೆಯನ್ನು ನೋಡಿಕೊಂಡಿರುವ ಕಾರಣ ನನ್ನ ತಂದೆ ಅವರಿಗೆ ಆಸ್ತಿಯನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ 2 ನೇ ಪ್ರತಿವಾದಿ ತಮ್ಮ ಹೆಂಡತಿಯ ಹೆಸರಿನಲ್ಲಿ ಇರುವ ಆಸ್ತಿಯನ್ನು ಮಾರಾಟ ಮಾಡಿ ಹಣವನ್ನು ನಮಗೇ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾವು ಮನೆ

ಕಟ್ಟುವ ಸಮಯದಲ್ಲಿ 2 ನೇ ಪ್ರತಿವಾದಿಯವರು ಹಣವನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಬದಲಾಗಿ ನಾವೇ ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ.

**13.** ನಮ್ಮ ತಂದೆಗೆ ರೂ. 15,000/- ಬರುತ್ತಿದ್ದ ಕಾರಣ ಇಷ್ಟೆಲ್ಲಾ ಖರ್ಚು ವೆಚ್ಚ ನಿಭಾಯಿಸಲು ಆಗದೇ ಇರುವ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 2 ನನ್ನ ತಾಯಿಯ ಹೆಸರಿನಲ್ಲಿ ಇದೆ ಎಂದರೆ ನನ್ನ ತಂದೆ ತೀರಿಕೊಂಡ ನಂತರ ಪವತಿ ಆಗಿದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ರ ಆಸ್ತಿಯನ್ನು 2 ನೇ ಪ್ರತಿವಾದಿ ಅಭಿವೃದ್ಧಿ ಮಾಡಿದ ಕಾರಣ ಅದನ್ನು ನೋಡಿ ಹೊಟ್ಟೆಕಿಚ್ಚಿನಿಂದ ಸುಳ್ಳು ದಾವೆ ತಂದಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ವೈಧ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**